**ಮೂರು ಮಂದಿ ಕುರುಡರು -ಹೆಚ್‌ಎಸ್ ಶಿವಪ್ರಕಾಶ್**

1954 ರಲ್ಲಿ ಜನಿಸಿದ ಎಚ್‌ಎಸ್ ಶಿವಪ್ರಕಾಶ್ ರವರು ಏಳು ಕವನ ಸಂಕಲನಗಳನ್ನು 12 ನಾಟಕಗಳನ್ನು ರಚಿಸಿದ್ದಾರೆ, ಮಿಲರೇಪ , ಮಳೆ ಬಿದ್ದ ನೆಲದಲ್ಲಿ , ಅನು ಕ್ಷಣ ಚರಿತೆ , ಮಹಾ ಚೈತ್ರ , ಸುಲ್ತಾನ್ ಟಿಪ್ಪು, ಮಂಟೇಸ್ವಾಮಿ ಕಥಾ ಪ್ರಸಂಗ ಮುಂತಾದ ಕೃತಿಗಳನ್ನು ಕಾಣಬಹುದು.

ಈ ಜಗತ್ತಿನಲ್ಲಿ ಕಾಲದ ಪರಿಕಲ್ಪನೆಯನ್ನು ಕುರಿತು ತಿಳಿಯುವ ಸಲುವಾಗಿ ಹಲವಾರು ಮಂದಿ ಚಿಂತಕರು ಹಲವು ಆಯಾಮಗಳಲ್ಲಿ ಯೋಚಿಸಿದ್ದಾರೆ, ಚಿಂತಿಸಿದ್ದಾರೆ, ಸಿದ್ಧಾಂತಗಳನ್ನು ಮಂಡಿಸಿದ್ದಾರೆ, ಕವನ ಕಟ್ಟಿದ್ದಾರೆ, ಅದು ಧಾರ್ಮಿಕವಾಗೋ ತಾತ್ವಿಕವಾಗೋ ವಾಸ್ತವಕ್ಕೆ ಹತ್ತಿರದಲ್ಲೋ, ದೂರದಲ್ಲೋ ಒಟ್ಟಾರೆಯಾಗಿ ಅಮೂರ್ತ ಕಾಲ ಕಲ್ಪನೆಗೆ ಹಲವು ಬಗೆಯ ಮಾಪನಗಳು ವ್ಯಾಖ್ಯಾನಗಳು ನಡೆದಿದೆ, ಹಿಂದೆ ಇಂದು ಮುಂದು ಎಂಬ ಕಾಲ ವಿಭಜನೆಯನ್ನು ದಾಟಿಕೊಂಡು ಮುಂದೆ ಸಾಗಿದಾಗ ಕಾಲಾತೀತವಾದ ಸಾಧನೆ ನಮ್ಮದಾಗುತ್ತದೆ.

ಮೊದಲನೇ ಹಂತದಲ್ಲಿ "ಮೂರು ಮಂದಿ ಜೀವದ ಗೆಳೆಯರು" ಎಂಬ ಶಬ್ದಗಳು ತಲೆಮಾರುಗಳನ್ನು ಕುರಿತೋ ಭೂತ ಭವಿಷ್ಯ ವರ್ತಮಾನದ ಕುರಿತೋ ಆಗಿರಬಹುದಾದರೂ ಒಂದಕ್ಕೊಂದು ಬೆಸುಗೆಯಾಗಿರುವುದೇ ಆಗಿದೆ. ಲೋಕದ ಬದುಕು "ಕುರುಡು" ಆಗಿರುವಂತೆ ಕಾಣುತ್ತಿರುವುದಕ್ಕೆ ಕಾರಣ ಕಾಲದ ಕುರಿತು ನಮ್ಮ ಅಜ್ಞಾನ, ಅನಿಶ್ಚಿತತೆ, ಮುಂದೆ ಸಂಭವಿಸಬಹುದಾದ ಸಂಭಾವ್ಯತೆಯ ಕುರಿತು ನಮ್ಮ ಕಲ್ಪನೆ . ಹಿಂದೆಯಿಲ್ಲದ ಇಂದು ನಾಳೆಗಳ ಕಲ್ಪಿಸುವುದು ಕೂಡ ಅಸಾಧ್ಯ. ಹೀಗಾಗಿ ಇಂತಹ ಕಾಲದ ಶೋಧನೆಗಾಗಿ ಮೂರು ಗೆಳೆಯರು ಮೂರು ದಿಕ್ಕಿಗೆ ಪಯಣಿಸುತ್ತಾರೆ.

ಹಿಂದೆ ಎಂದರೆ ಗತದ ಕಡೆಗೆ ಸಾಗುವ ವ್ಯಕ್ತಿ ತಾಯ ಗರ್ಭದಲ್ಲಿ ಮರಳಿ ಹೊಕ್ಕು ಕಲ್ಲಿನಲ್ಲಿ ಕಲ್ಲಾಗುವುದು ನೀರಿನಲ್ಲಿ ನೀರಾಗುವ ಮೂಲಕ ತಾನು ಮಾಡಿದ ತಪ್ಪನ್ನು ತಿದ್ದಿಕೊಳ್ಳಲು ಅವಕಾಶ ಸಿಗುವ ಹೆಬ್ಬಯಕೆ ಇಲ್ಲಿದೆ. ಆದರೆ ಜೀವನ ನಿಸರ್ಗವೆಂಬ ಈ ಚದುರಂಗದಾಟದಲ್ಲಿ ಅದಕ್ಕೆ ಅವಕಾಶವಿಲ್ಲ. ಬಹುದೂರ ಪಯಣಿಸಿದ ವ್ಯಕ್ತಿ ಹಿಮ್ಮುಖವಾಗಿ ಚಲಿಸುವುದು ಅಸಾಧ್ಯ. ಆದರೆ ಮುಂದೆ ತನ್ನಿಂದಾಗುವ ಪ್ರಮಾದಕ್ಕೆ ಇದರಿಂದ ಉತ್ತರ ಸಿಗಬಹುದು.

ಎರಡನೆಯದಾಗಿ, ಮುಂದೆ ಸಾಗುವ ಇನ್ನೊಬ್ಬ ಗೆಳೆಯ ಭೂಮಿಯ ಮೇಲೆ ಅಗಾಧವಾದದನ್ನು ಸಾಧಿಸಿ ತನ್ನ ಹಿಡಿತದಲ್ಲಿ ಇಟ್ಟುಕೊಳ್ಳಲು ಬಯಸಿ ಹೊರಡುವ ಸಂಚಾರ , ಕೊನೆಗೆ ವಿಮಾನದ ಮುಖೇನ ಆಕಾಶದಲ್ಲಿ ಹಾರಿಹಾರಿ ಚುಕ್ಕಿಯಾಗುವುದನ್ನು ಧ್ವನಿಸುತ್ತದೆ . ಈ ಮೂಲಕ ಈ ಭೂಮಿಯಲ್ಲಿ ಪ್ರಗತಿ ಅಭಿವೃದ್ಧಿ ಮುಂತಾದ ಮಾತುಗಳ ಮುಖೇನ ಪರಿಸರವನ್ನು ಹಾಳು ಮಾಡುವ ಮೂಲಕ ತಾನು ಸಾಧಿಸಿದ್ದೇನೆ ಎಂದು ಬೀಗುವ ವ್ಯಕ್ತಿ ಆಕಾಶದಲ್ಲಿ ಚುಕ್ಕಿಗಳಲ್ಲಿ ಒಂದಾಗುತ್ತಾನೆ ಎಂಬುದರ ಜೊತೆಗೆ ವಿಜ್ಞಾನ ಅಭಿವೃದ್ಧಿ ಸದಭಿರುಚಿಯಲ್ಲಿರಲಿ ಎಂಬ ಅಂಶವನ್ನು ಅದು ಧ್ವನಿಸುತ್ತದೆ .

ನಿಂತ ಕಡೆಯೇ ನಿಂತು ಕವಾಯತು, ಕಸರತ್ತು ನಡೆಸುತ್ತಾ ಈ ಭೂಮಿಯ ಬದುಕು ಮಾತ್ರವೇ ಶಾಶ್ವತವೆಂದು ಬಗೆದು ತನ್ನದೆ ಲೋಕದಲ್ಲಿ ವಿಹರಿಸುವ ಸಾಮಾನ್ಯರು. ಹಾಗೆ ಈ ಲೋಕದ ಆಕರ್ಷಣೆ ಪ್ರಲೋಭನೆಗಳಲ್ಲಿ ಆಯಸ್ಸು ಮುಗಿದು ಹೋಗುತ್ತಿದೆ. ಈ ಮೇಲಿನ ಮೂರು ಬಗೆಯ ಚಿಂತನೆ ಗಳಿಗಿಂತ ಭಿನ್ನವಾದ, ವಿಶಿಷ್ಟವಾದ ಬದುಕೊಂದು ಇದೆ. ಅದೇ ನಮ್ಮ ಹೃದಯದೊಳಗಿನ ಪಯಣ. ಆ ಹಾದಿಯಲ್ಲಿ ಸಾಗಿದರೆ ಮಾತ್ರ ಬೇರೆ ಆಯಾಮಗಳ ಜ್ಞಾನಕ್ಕೆ ತೆರೆದುಕೊಳ್ಳಬಹುದು. ಅದೇ ಮೋಕ್ಷದ ಹಾದಿ ಎಂದು ಹೇಳಬಹುದು.